# ವಚನಗಳಲ್ಲಿ ದಾಸೋಹ ತತ್ವ

**ವಾಲಪ್ಪ ಎಸ್. ಲಮಾಣಿ***

**DOI: https://doi.org/10.5281/zenodo.19501510**

**ABSTRACT**

ಹನ್ನೆರಡನೆಯ ಶತಮಾನದ ಶರಣ ಚಳವಳಿಯಲ್ಲಿ 'ದಾಸೋಹ' ತತ್ವವು ಅತ್ಯಂತ ಪ್ರಮುಖ ಮೌಲ್ಯವಾಗಿದೆ. ಕಾಯಕ ಮತ್ತು ದಾಸೋಹಗಳು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. 'ನಾನು ದಾಸ' ಎಂಬ ಕಿಂಕರ ಭಾವನೆಯೊಂದಿಗೆ ಅಹಂಕಾರವನ್ನು ತೊರೆದು, ತ್ರಿಕರಣ ಶುದ್ಧಿಯಿಂದ ಗುರು, ಲಿಂಗ ಮತ್ತು ಜಂಗಮಕ್ಕೆ ಸೇವೆ ಸಲ್ಲಿಸುವುದೇ ದಾಸೋಹದ ಮೂಲ ಆಶಯ. ಕೇವಲ ಸಂಪತ್ತಿನ ಹಂಚುವಿಕೆಯಷ್ಟೇ ದಾಸೋಹವಲ್ಲ; ಬದಲಾಗಿ ತನು, ಮನ ಮತ್ತು ಧನಗಳನ್ನು ಸದಾಚಾರ ಹಾಗೂ ಸಮರ್ಪಣಾ ಭಾವದಿಂದ ಅರ್ಪಿಸುವ 'ತ್ರಿವಿಧ ದಾಸೋಹ'ವನ್ನು ಬಸವಣ್ಣ, ಅಲ್ಲಮಪ್ರಭು ಮುಂತಾದ ಶರಣರು ಎತ್ತಿಹಿಡಿದರು. ದಾನದಲ್ಲಿ ದಾತೃವಿನ ಅಹಂಭಾವವಿರುತ್ತದೆ, ಆದರೆ ದಾಸೋಹವು ಮನುಷ್ಯನ ಮದ ಮತ್ತು ಮತ್ಸರಗಳನ್ನು ನಾಶಪಡಿಸುತ್ತದೆ. ಸತ್ಯಶುದ್ಧ ಕಾಯಕದಿಂದ ಗಳಿಸಿದ ಸಂಪತ್ತಿನಿಂದ ಮಾತ್ರ ನಿಜವಾದ ದಾಸೋಹ ಸಾಧ್ಯ ಹಾಗೂ ಇದು ವ್ಯಕ್ತಿಯನ್ನು ಅಹಂಕಾರ ನಿರಸನದತ್ತ ಕೊಂಡೊಯ್ಯುತ್ತದೆ ಎಂಬುದನ್ನು ವಿವಿಧ ವಚನಗಳ ಹಿನ್ನೆಲೆಯಲ್ಲಿ ಇಲ್ಲಿ ಸಮಗ್ರವಾಗಿ ವಿಶ್ಲೇಷಿಸಲಾಗಿದೆ.

**KEYWORDS:** ದಾಸೋಹ ತತ್ವ, ತ್ರಿವಿಧ ದಾಸೋಹ, ಕಾಯಕ ಮತ್ತು ಸದಾಚಾರ, ಅಹಂಕಾರ ನಿರಸನ, ವಚನ ಸಾಹಿತ್ಯ.

* **ಡಾ. ವಾಲಪ್ಪ ಎಸ್. ಲಮಾಣಿ,** ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಎಂ.ಜಿ.ವ್ಹಿ.ಸಿ, ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಮಹಾವಿದ್ಯಾಲಯ, ಮುದ್ದೇಬಿಹಾಳ.

ಹನ್ನೆರಡನೆಯ ಶತಮಾನದಲ್ಲಿ ಜರುಗಿದ ಶರಣರ ಆಂದೋಲನದಲ್ಲಿ ಕಂಡುಬರುವ ಬಹುಮುಖ್ಯವಾದ ಪರಿಕಲ್ಪನೆಗಳಲ್ಲಿ 'ದಾಸೋಹ' ಕೂಡ ಒಂದು. 'ದಾಸೋಹ' ಇದು ಸಂಸ್ಕೃತದ 'ದಾಸೋಹಂ' ಎಂಬ ವಾಕ್ಯದ ಕನ್ನಡ ರೂಪವಾಗಿದೆ. 'ದಾಸೋಹಂ' ಅಂದರೆ ನಾನು ದಾಸ ಎಂಬ ಭಾವನೆ. ಇದು ವೀರಶೈವ ಮತದಲ್ಲಿ ಒಂದು ಪಾರಿಭಾಷಿಕ ಶಬ್ದವಾಗಿ ಹೋಗಿದೆ. ವ್ಯಕ್ತಿಯು ತನ್ನ ಅಹಂಕಾರವನ್ನು ನಾಶಮಾಡಿಕೊಂಡು ತನ್ನ ಎಲ್ಲ ತನು, ಮನ, ಧನಾದಿಗಳೂ ಗುರು, ಲಿಂಗ, ಜಂಗಮಗಳಿಗೆ ಮಾಡುವ ಸೇವೆಗೆ ಅರ್ಪಿತ ಎಂಬ ಭಾವನೆ. ಆ ಭಾವನೆಯಿಂದ ಮಾಡುವ ಸೇವೆಗೂ ದಾಸೋಹ ಎಂಬ ಹೆಸರೇ ಅನ್ವಯಿಸುತ್ತದೆ. ಸೇವಾ ದೃಷ್ಟಿಯಿಂದ ಜಂಗಮರಿಗೆ ಮನಸ್ಸು ತೃಪ್ತಿ ಆಗುವಂತೆ ಮಾಡುವ ಅನ್ನಸಂತರ್ಪಣೆಗೂ ದಾಸೋಹ ಶಬ್ದ ಅನ್ವಯಿಸುತ್ತದೆ.

'ದಾಸೋಹಂ' ಭಾವವೇ ಕಿಂಕರ ಭಾವ. 'ದಾಸೋಹ'ತನ ಎಂದರೆ ಕಿಂಕರ ವೃತ್ತಿ, ವ್ಯವಹಾರ, ಈ ಬಗೆಯ ತಿಳಿವಳಿಕೆಯುಳ್ಳವನನ್ನು ದಾಸೋಹಿ ಎಂದು ಗುರುತಿಸಲಾಗುತ್ತದೆ. ಈ ಶಬ್ದಕ್ಕೆ ಮೂಲ ಸಂಸ್ಕೃತದ ಒಂದು ವಾಕ್ಯ 'ದಾಸ ನಾನು ದಾಸನಾಗಿದ್ದೇನೆ.' ಕನ್ನಡದಲ್ಲಿ ಈ ವಾಕ್ಯವು ಒಂದು ಪಾರಿಭಾಷಿಕ ಪದವಾಗಿ ಪ್ರಯೋಗವಾಗುತ್ತ ಇದೆ. ಇದಕ್ಕೆ ಕನ್ನಡದಲ್ಲಿ ಇರುವ ಅರ್ಥಗಳು ಹೀಗಿವೆ; ನಾನು ದಾಸನೆಂಬ ಭಾವನೆ, ಪುತಿನ ಅವರ ಗಣೇಶ ದರ್ಶನದ ವಾಕ್ಯವನ್ನು ನೋಡಿ ಸಂಕಟವೆ ಇಲ್ಲದವಗೆ ವೆಂಕಟನು ಬೇಕೆ? ಸಂತೋಷವುಳ್ಳವಗೆ ದಾಸೋಹವೇಕೆ? ಜಂಗಮ ಭೋಜನ, ಪುಣ್ಯವನ್ನು ಗಳಿಸುವುದಕ್ಕಾಗಿ ಜಂಗಮರಿಗೆ ವೀರಶೈವರು ಮಾಡುವ ಊಟದ ತಯಾರಿ. ತನ್ನ ಗದ್ದೆಯಲ್ಲಿ ಬೆಳೆದ ಧಾನ್ಯವನ್ನು ಅವನು ಮಠದ ದಾಸೋಹಕ್ಕೆ ದಾನ ಮಾಡುತ್ತಾನೆ ಎಂಬ ವಾಕ್ಯವನ್ನು ನೋಡಿ. ವೀರಶೈವರು ಸೇವಾಭಾವದಿಂದ ಮಾಡುವ ಗುರು, ಲಿಂಗ, ಜಂಗಮ ಶುಶ್ರೂಷೆಯಾಗಿದೆ. ಈ ಪದವು ದಾಸೋಹ ಎಂಬ ರೂಪದಲ್ಲಿಯೂ ಪ್ರಚಾರದಲ್ಲಿದೆ.

ಶರಣರ ಸಾಮಾಜಿಕ ಸಿದ್ಧಾಂತಗಳಲ್ಲಿ ಕಾಯಕದಂತೆ ದಾಸೋಹವೂ ಒಂದು ಮಹತ್ವದ ಮೌಲ್ಯ. ಕಾಯಕ ಮತ್ತು ದಾಸೋಹ ಒಂದೇ ನಾಣ್ಯದ ಎರಡು ಮುಖಗಳಂತೆ ಒಂದಕ್ಕೊಂದು ಪೂರಕವಾಗಿವೆ. ಕಾಯಕಕ್ಕೆ ಹೇಗೆ ನಿಯಮಗಳಿವೆಯೋ ದಾಸೋಹಕ್ಕೂ ನಿಯಮಗಳಿವೆ. ಮೋಸಮಾಡಿ, ಕಳವುಮಾಡಿ ತಂದ ಧನವನ್ನು ದಾಸೋಹಕ್ಕೆ ಸ್ವೀಕರಿಸುವುದಿಲ್ಲ. ಶ್ರಮಪಟ್ಟು ದುಡಿದು, ಸದಾಚಾರದಿಂದ ಗಳಿಸಿ, ಅಹಂಕಾರ ತೊರೆದು ಸಮರ್ಪಣಾಭಾವದಿಂದ ಅರ್ಪಿಸಿದಾಗ ಮಾತ್ರ ಅಂತಹ ಧನ ದಾಸೋಹಕ್ಕೆ ವಿನಿಯೋಗವಾಗುತ್ತದೆ. ಅಲ್ಲಮಪ್ರಭು ದಾಸೋಹದ ವ್ಯಾಖ್ಯೆಯನ್ನು ಸೊಗಸಾಗಿ ಹೇಳಿದ್ದಾರೆ. "ಸೋಹಂ– ಎಂಬುದಕ್ಕೆ ದಾಸೋಹವ ಮಾಡದಿರ್ದಡೆ ಅತಿಗಳೆವೆ ನೋಡಾ ಗುಹೇಶ್ವರಾ" ಎಂದು ಹೇಳಿದ್ದಾರೆ. ಇದೇ ವಿಷಯದ ಬಗೆಗೆ ಸಿದ್ಧರಾಮಯ್ಯ ತಮ್ಮ ವಚನವೊಂದರಲ್ಲಿ ದಾಸೋಹದ ವ್ಯಾಖ್ಯೆಯನ್ನು ಇನ್ನೂ ಸ್ಪಷ್ಟಪಡಿಸಿದ್ದಾರೆ: ಸೋಹಂ–ಎಂಬುದು ಅಂತರಂಗದ ಮದ ಮತ್ತು 'ಶಿವೋಹಂ' ಎಂಬುದು ಬಹಿರಂಗದ ಮದ. "ಈ ದ್ವಂದ್ವವನಳಿದು ದಾಸೋಹಂ ಎಂದೆನಿಸಯ್ಯಾ" ಎಂದು ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ ಕೇಳಿಕೊಂಡಿದ್ದಾರೆ.

ದಾಸೋಹವೆಂದರೆ, ಅನ್ನದಾಸೋಹ ಮಾತ್ರವಲ್ಲ. ಬಸವಣ್ಣನವರು ತಮ್ಮ ವಚನಗಳಲ್ಲಿ ವಿವಿಧ ದಾಸೋಹಗಳ ಪರಿಚಯ ನೀಡಿದ್ದಾರೆ. ಭಕ್ತಶ್ರೇಷ್ಠನಾದವನು ಭಕ್ತಿದಾಸೋಹ ಮಾಡಬಹುದು, ಯುಕ್ತನಾದವನು ಯುಕ್ತಿ ದಾಸೋಹವ ಮಾಡಬಹುದು. ಐಕ್ಯಸ್ಥಲವ ಸಾಧಿಸಿದವನು ಮಮಕಾರ ದಾಸೋಹವ ಮಾಡಬಹುದು. ಎಲ್ಲ ವಿಷಯದಲ್ಲಿಯೂ ದಾಸೋಹವಿದೆಯೆಂದು ವಿವರಿಸಿದ್ದಾರೆ.

